ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಚಿಕ್ಕಮಗಳೂರು

**<u>ಸೆಷನ್ಸ್ ಕೇಸ್ ನಂ.51-2026</u>**

ಫಿರ್ಯಾದುದಾರರು ರಾಜ್ಯದ ಪರವಾಗಿ ತರೀಕೆರೆ ಆರಕ್ಷಕ ಠಾಣೆ.

ವಿರುದ್ಧ

ಆರೋಪಿತರು ರಿಯಾಜ್

<u>ದೋಷಾರೋಪಣೆ</u>

ಶ್ರೀ ರವೀಂದ್ರ ಹೆಗಡೆ , ಎಂ.ಎ., ಎಲ್ ಎಲ್ ಎಂ, ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರಾದ ಆದ ನಾನು

ರಿಯಾಜ್<br>
ಬಿನ್ ಅಬ್ದುಲ್ ಇಬ್ರಾಹಿಂ<br>
19 ವರ್ಷ,<br>
ವಾಸ:ಕುಸುವ ಗ್ರಾಮ<br>
ಗೊರಕ್ಪುರ ಜಿಲ್ಲೆ<br>
ಉತ್ತರ ಪ್ರದೇಶ್

ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ:

ತರೀಕೆರೆ ನಗರ ಠಾಣಾ ವ್ಯಾಪ್ತಿಗೆ ಬರುವ ಡಿ ವಿ ಜಿ ರಸ್ತೆಯಲ್ಲಿರುವ ಚಾಸಾ:1 ಪ್ರಕಾಶ್ ರವರ ಮನೆಯ ಮೇಲ್ಭಾಗದ ಹೆಂಚಿನ ಮನೆಗೆ ಒಂದು ವರ್ಷಗಳ ಹಿಂದೆ ಉತ್ತರ ಪ್ರದೇಶದ ಘೊರಕ್ಪುರ ವಾಸಿ ಅಜೀದ್ ರವರು ಬಾಡಿಗೆಗೆ ಬಂದಿದ್ದು , ಸದರಿ ಮನೆಯಲ್ಲಿ ಈಗ್ಗೆ 4 – 5 ತಿಂಗಳಿಂದ ಅಜೀದ್ ರವರ ಜೊತೆ ಪೇಂಟಿಂಗ್ ಮತ್ತು ಪಾಲೀಶ್ ಕೆಲಸ ಮಾಡುತ್ತಿದ್ದ ಆರೋಪಿಯಾದ ನೀವು ಮತ್ತು ಮೃತ ಸರ್ಫರಾಜ್ ಅನ್ಸರಿ ಮತ್ತು ಚಾಸಾ:11 ರಿಂದ 13 ರವರುಗಳು ವಾಸವಾಗಿದ್ದು , ನೀವುಗಳು ನಿಮ್ಮ ಸ್ವಂತ ಊರಿಗೆ ಸ್ವಂತ ಕೆಲಸದ ನಿಮಿತ್ತ ಹೋಗಿ ವಾಪಾಸ್ಸು ಬಂದ ನಂತರ ದಿನಾಂಕ 3.11.2025 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಮತ್ತು ಚಾಸಾ:1, ಚಾಸಾ:11 ರಿಂದ 13 ಮತ್ತು ಮೃತ ಸರ್ಫರಾಜ್ ಅನ್ಸರಿ ರವರುಗಳು ಮನೆಯಲ್ಲಿದ್ದಾಗ ಮೃತ ಸರ್ಫರಾಜ್ ಅನ್ಸರಿ ಆರೋಪಿಯಾದ ನಿಮ್ಮ ತಾಯಿ ಬಗ್ಗೆ ಕೆಟ್ಟದ್ದಾಗಿ ಮಾತನಾಡಿದ್ದು , ಆ ಬಗ್ಗೆ ಆರೋಪಿಯಾದ ನಿಮ್ಮ ಮತ್ತು ಮೃತ ಸರ್ಫರಾಜ್ ಅನ್ಸರಿ ಇಬ್ಬರಿಗೂ

ಜಗಳವಾಗಿದ್ದು, ಜೊತೆಯಲ್ಲಿದ್ದವರು ಜಗಳ ಬಿಡಿಸಿದ್ದು , ನಂತರ ಪುನಃ ಮೃತ ಸರ್ಫರಾಜ್ ಅನ್ಸರಿ ರವರು ಆರೋಪಿಯಾದ ನಿಮ್ಮ ತಾಯಿ ಬಗ್ಗೆ ಕೆಟ್ಟದ್ದಾಗಿ ಬೈಯ್ದಿದ್ದು , ಆಗ ಆರೋಪಿಯಾದ ನೀವು ಏಕಾ ಏಕಿ ಮನೆಯಲ್ಲಿದ್ದ ಕುಳಿತುಕೊಳ್ಳುವ ಮರದ ಮಣೆಯನ್ನು ತೆಗೆದುಕೊಂಡು ಮೃತ ಸರ್ಫರಾಜ್ ಅನ್ಸರಿ ನನ್ನು ಕೊಲೆ ಮಾಡುವ ಉದ್ದೇಶದಿಂದ , ಆತನ ತಲೆಗೆ ಹೊಡೆದು , ದೂಡಿದಾಗ ಅಡುಗೆ ಮನೆಯ ಕಟ್ಟೆಗೆ ಮೃತ ಸರ್ಫರಾಜ್ ಅನ್ಸರಿ ನ ತಲೆ ಬಡಿದು, ಅವರು ಕೆಳಗೆ ಬಿದ್ದಿದ್ದು , ನಂತರ ಆರೋಪಿಯಾದ ನೀವು ಮೃತ ಸರ್ಫರಾಜ್ ಅನ್ಸರಿ ನ ಎದೆಯ ಮೇಲೆ ನಿಂತು ಕಾಲಿನಿಂದ ತುಳಿದಾಡಿ ಆತನ ಕೊಲೆ ಮಾಡಿದ್ದು, ಆ ರೀತಿ ಮಾಡಿದಲ್ಲಿ ಆತನ ಮರಣ ಸಂಭವಿಸಬಹುದು ಎಂದು ಗೊತ್ತಿದ್ದರೂ ಸಹಾ ಅವರಿಗೆ ತಲೆಗೆ ಹೊಡೆದು ಹೊಡೆದು, ಅಡುಗೆ ಮನೆಯ ಕಟ್ಟೆಗೆ ಅವರನ್ನು ದೂಕಿ , ಕಾಲಿನಿಂದ ತುಳಿದು ಮೃತ ಸರ್ಫರಾಜ್ ಅನ್ಸರಿ ಮೃತಪಡಲು ಕಾರಣರಾಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 103(1) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಮಾಡಿದ್ದೇನೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸರ್ಫರಾಜ್ ಅನ್ಸರಿ ರವರನ್ನು ಕೊಲೆ ಮಾಡಿದ ನಂತರ ಕೃತ್ಯಕ್ಕೆ ಉಪಯೋಗಿಸಿದ ಮರದ ಮಣೆಯ ಪೀಸನ್ನು ಮನೆಯಿಂದ ಸ್ವಲ್ಪ ದೂರದಲ್ಲಿ ಗಿಡಗಳ ಮರೆಯಲ್ಲಿ ಎಸೆದು ತಲೆಮರೆಸಿಕೊಂಡು ಹೋಗಿ ಸಾಕ್ಷಿಯನ್ನು ನಾಶಮಾಡಿದ್ದು ಕಾರಣ ಆರೋಪಿಯಾದ ನೀವು ಆ ಮೂಲಕ ಬಿ ಎನ್ ಎಸ್ ಕಲಂ 238 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 21 ನೇ ದಿವಸ ಜುಲೈ ಮಾಹೆಯ 2026 ನೇ ಇಸವಿಯಂದು.

ಸಹಿ

( ರವೀಂದ್ರ ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು

<u>ಆರೋಪಿಯ ಆಪಾದನೆ</u>

ಪ್ರಶ್ನೆ 1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ದಿನಾಂಕ 21 ನೇ ದಿವಸ ಜುಲೈ ಮಾಹೆಯ 2026 ರಂದು ತೆರೆದನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಹಿಂದಿಯಲ್ಲಿ ಅರ್ಥೈಸಿ ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಭಾಷಾಂತರಿಸಿ ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
*( ರವೀಂದ್ರ ಹೆಗಡೆ )*
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು

ಎಂವಿಪಿ